**ವ್ಯಾಖ್ಯಾನ:**

## <u>ಶ್ರೀಪತಿಯ ಕಟಾಕ್ಷವೀಕ್ಷಣವು ತಪ್ಪುವಾಗ</u>

ಶ್ರೀಮದ್ಭಾಗವತ ಸಪ್ತಮ ಸ್ಕಂಧ :---

ಉಶೀನರ ದೇಶದ ರಾಜ ಸುಯಜ್ಞನು ಶತ್ರುಗಳಿಂದ ಹತನಾಗಿ ಸತ್ತುಬಿದ್ದಿದ್ದನು.

ಅವನ ಹೆಂಡಂದಿರು ಗೋಳೋ ಎಂದಳುತ್ತ ಶವ ಸಂಸ್ಕಾರಕ್ಕೆ ಅವಕಾಶ ಕೊಡಲಿಲ್ಲ.ಕತ್ತಲಾಯಿತು.ಆಗ ಯಮನು ಬಾಲಕ ರೂಪದಿಂದ ಬಂದು ಪ್ರೇತ ಬಂಧುಗಳನ್ನು ನೋಡಿ ಅನೇಕ ರೀತಿಯಿಂದ ಉಪದೇಶ ಮಾಡುತ್ತಾನೆ ಅದರಲ್ಲಿ ಅವನು ಹೇಳಿದ ಒಂದು ಮಾತು –

**" ಪಥಿ ಚ್ಯುತಂ ತಿಷ್ಠತಿ ದಿಷ್ಟರಕ್ಷಿತಂ ಗೃಹೇ ಸ್ಥಿತಂ ತದ್ವಿಹತಂ ವಿನಶ್ಯತಿ/**

**ಜೀವತ್ಯನಾಥೋ$ಪಿ ತದೀಕ್ಷಿತೋ ವನೇ ಗೃಹೇ$ಪಿ ಗುಪ್ತೋ$ಸ್ಯ ಹತೋ ನ ಜೀವತಿ//"**

**ಅರ್ಥ---** ದಾರಿಯಲ್ಲಿ ಬಿದ್ದಿದ್ದರೂ ಶ್ರೀಹರಿಯಿಂದ ರಕ್ಷಿತವಾದುದು ಇದ್ದೇ ಇರುವುದು. ಮನೆಯಲ್ಲಿ ಭದ್ರವಾಗಿ ಇಟ್ಟಿದ್ದರೂ ಅವನಿಂದ ನಾಶಮಾಡಲ್ಪಟ್ಟಿದ್ದು ನಾಶವಾಗುವುದು.ತಂದೆ ತಾಯಿ ಮುಂತಾದ ಪಾಲಕರಿಲ್ಲದಿದ್ದರೂ ಕಾಡಿನಲ್ಲಿಯೂ ಶ್ರೀಹರಿಯಿಂದ ರಕ್ಷಿಸಲ್ಪಡುವನು. ಶ್ರೀಹರಿಯಿಂದ ಸಂಹೃತನಾದವನು ಮನೆಯಲ್ಲಿ ರಕ್ಷಿಸುವವರಿದ್ದರೂ ಬದುಕುವುದಿಲ್ಲ.

ಆದ್ದರಿಂದ ಅನಿವಾರ್ಯವಾದ ಸಾವಿಗೆ ಚಿಂತಿಸದಿರಿ ಎಂದು ಸಮಾಧಾನ ಹೇಳುತ್ತಾನೆ.

ಈ ಪ್ರಸಂಗವನ್ನೇ ಶ್ರೀ ಪುರಂದರ ದಾಸರು ತಮ್ಮ ಈ ಉಗಾಭೋಗದಲ್ಲಿ ಕನ್ನಡೀಕರಿಸಿದ್ದಾರೆ.

ಹರಿಯಿಚ್ಛೆಯಂತೆ ನಡೆವುದೆಲ್ಲವೆಂದರಿಯಬೇಕು.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮಾನರಾವ ಕುಲಕರ್ಣಿ, ವಿಜಯಪುರ, ಕರ್ನಾಟಕ